ಇದ್ದವು. ತಾಯಿ ಹಾಲನ್ನು ಕುಡಿಯುತ್ತಿದ್ದವು ಪ್ರಾಯಶಃ. ಅವುಗಳಿಗೆ ಹುಲಿ ಕೂತಿರುವುದು ಗೊತ್ತಿರಲಿಲ್ಲ ಎಂದು ಕಾಣುತ್ತದೆ. ಅದರ ಯಜಮಾನನಿಗೆ ಒಮ್ಮೆಲೇ ವಾಸನೆ ಹೊಡೆದು ಹುಲಿ ಇಲ್ಲೇ ಎಲ್ಲೋ ಪಕ್ಕದಲ್ಲಿರುವುದು ಗೊತ್ತಾಗಿಹೋಯಿತು. ತಕ್ಷಣವೇ ಅದು ಒಮ್ಮೆ ಹೂಂಕಾರ ಮಾಡಿ ತನ್ನೆಲ್ಲಾ ಸಂಗಡಿಗರಿಗೆ ಎಚ್ಚರಿಕೆ ನೀಡಿತು. ಆಗ ತಾಯಿಯ ಬಳಿಯ ಕಾಲಲ್ಲಿ ಓಡಾಡುತ್ತಿದ್ದ ಮರಿಗಳು ಎಲ್ಲವೂ ತಕ್ಷಣವೇ ಓಡಿಬಂದು ಗುಂಪಿನ ನಡುವೆ ಗುಡ್ಡೆಯಾಗಿ ಕೂತವು. ಅವುಗಳ ಸುತ್ತ ಕಾಡೆಮ್ಮೆಯ ಒಂದು ಗುಂಪು ಎಲ್ಲ ದಿಕ್ಕುಗಳ ಕಡೆಗೂ ಮುಖ ಮಾಡಿ ಚಕ್ರಾಕಾರದಲ್ಲಿ ವೃತ್ತಾಕಾರವಾಗಿ ನಿಂತವು. ಇದು ತಮಗೆ ತಾವೇ ಅವು ರಚಿಸಿಕೊಳ್ಳುವ ಒಂದು ಚಕ್ರವ್ಯೂಹ. ಮಕ್ಕಳನ್ನು ನಡುವೆ ಇಟ್ಟು ಸುತ್ತ ಯಾವ ದಿಕ್ಕಿನಿಂದ ಹುಲಿ ಬಂದರೂ ಅದನ್ನು ಎದುರಿಸುವ ಧೈರ್ಯದೊಂದಿಗೆ ಎಲ್ಲವೂ ಕೋಡನ್ನು ಎತ್ತರಿಸಿಕೊಂಡು ಶಸ್ತ್ರ ಸಜ್ಜಿತ ಸೈನಿಕರಂತೆ ನಿಂತಿದ್ದನ್ನ ನೋಡಿ ನಾನು ಚಕಿತಗೊಂಡೆ. ಈ ಪ್ರಕೃತಿ ಪ್ರತಿಯೊಂದು ಪ್ರಾಣಿ ಪಕ್ಷಿಗೂ ತನ್ನನ್ನು ತಾನು ರಕ್ಷಿಸಿಕೊಳ್ಳುವ ಒಂದು ಅದ್ಭುತ ಕಲೆಯನ್ನು ಕೊಟ್ಟಿರುತ್ತದೆ. ಇಲ್ಲೂ ಕೂಡ ಅಷ್ಟೇ. ಯಾವುದೇ ಆಪತ್ತು ಬಂದರೂ ಎದುರಿಸಲು ಸನ್ನದ್ಧರಾಗಿ ಅವು ನಿಂತದ್ದನ್ನು ನೋಡಿದೆ. ಈಗ ಹುಲಿ ಬಂದು ಇವುಗಳನ್ನು ಹಿಡಿಯುವುದೋ ಇಲ್ಲವೋ ಎಂದು ನಾವು ಅಲ್ಲಿ ಕೂತು ಹೆಚ್ಚು ಮಾತಾಡುವಂತಿರಲಿಲ್ಲ. ಹೀಗಾಗಿ ಪಿಸುದನಿಯಲ್ಲಿ ನಮ್ಮೊಳಗೆ ನಾವು ಸಣ್ಣಗೆ ಮಾತಾಡಿಕೊಳ್ಳುತ್ತಿದ್ದೆವು. ಕೆಲವರು ಹುಲಿ ಬರುತ್ತದೆ ಅಂತಲೂ ಕೆಲವರು ಅದು ಖಂಡಿತ ಬರುವುದಿಲ್ಲ ಎಂತಲೂ. ಹೀಗೆ ಪರಸ್ಪರ ತಿಳಿದಂತೆ ಹೇಳುತ್ತಲೇ ಇದ್ದರು. ಒಬ್ಬರು ಹೀಗೆ ಹೇಳಿದರು: ಇವು ಒಗ್ಗಟ್ಟಾದ ರೀತಿಯನ್ನು ನೋಡಿ ಖಂಡಿತ ಹುಲಿ ಬರುವುದಿಲ್ಲ. ಯಾಕೆಂದರೆ ಹುಲಿ ಯಾವುದೇ ಪ್ರಾಣಿ ತನಗೆ ಎದುರಾಗಿ ನಿಂತು ಕಣ್ಣಿಗೆ ಕಣ್ಣು ಕೊಟ್ಟು ನಿಂತರೆ ಅದು ಬಂದು ನುಗ್ಗಿಕೊಳ್ಳುವ ಸಾಹಸವನ್ನು ಮಾಡುವುದಿಲ್ಲ. ಅದರ ಸ್ವಭಾವವೇ ಬೆನ್ನ ಹಿಂದಿನಿಂದ ಬಂದು ತನ್ನ ಶಿಕಾರಿಯನ್ನು ಅಕ್ರಮವಾಗಿ ಕೊಲ್ಲುವುದು ಆಗಿರುತ್ತೆ. ಹೀಗಾಗಿ ಅದು ಖಂಡಿತ ಈಗ ಅಪಾಯ ಎಂದು ಅರಿತು ಬರುವುದೇ ಇಲ್ಲ ನೋಡುತ್ತಿರಿ' ಎಂದರು. ಇನ್ನೊಬ್ಬರು ಏನೂ ಹೇಳದೆ ಸುಮ್ಮನೆ ಕೂತಾಗ ನಾನು ನನ್ನ ಅನುಭವವನ್ನು ಹೇಳಿದೆ: ಒಮ್ಮೆ ಇದೇ ಹುಲಿ ಒಂದು ಗುಂಪಿನ ನಡುವೆ ನುಗ್ಗಿ ಸಣ್ಣ ಕರುವನ್ನ ಎಳೆದುಕೊಂಡು ಹೋಗಿದ್ದನ್ನ ನಾನು ಕಣ್ಣಾರೆ ನೋಡಿದೆ. ಅಲ್ಲಿ ಹುಲಿ ಅವಿತು ಕೂತಿದ್ದು ತಾನು ಬರುವ ದಿಕ್ಕನ್ನು ತಕ್ಷಣವೇ ಬದಲಿಸಿ, ಬೇರೊಂದು ದಿಕ್ಕಿನಿಂದ ಹೋಗಿ ಗಲಿಬಿಲಿ ಮಾಡಿ ಅವುಗಳು ಚೆಲ್ಲಾಪಿಲ್ಲಿಯಾಗುವಂತೆ ಮಾಡಿ ಅವುಗಳ ಧ್ಯಾನವನ್ನು ಬದಲಿಸಿ ಅವೆಲ್ಲವೂ ಭಯಗ್ರಸ್ತವಾಗಿ ದಿಕ್ಕಾಪಾಲಾಗಿ ಒಂದೊಂದು ಕಡೆ ಹೋಗುವಂತೆ ಮಾಡಿ, ತನ್ನ ಗುರಿ ಸಾಧಿಸುತ್ತದೆ ಎಂದು ನಾನು ನನ್ನ ವಾದವನ್ನು ಮಂಡಿಸಿದೆ. ಸಾಮಾನ್ಯವಾಗಿ ಹುಲಿಗಳು ಹಸಿವಾದಾಗ ಹೆಚ್ಚು ಅಕ್ರಮಣಶೀಲವಾಗುತ್ತವೆ. ತಮ್ಮ ಎದುರಿಗಿರುವ ಶಿಕಾರಿಯನ್ನು ಯಾವ ದಿಕ್ಕಿನಿಂದ ಬಂದು ಕೊಲ್ಲಬಹುದು ಮತ್ತು ಅವುಗಳ ಸಾಂಘಿಕ ಶಕ್ತಿಯನ್ನು ಹೇಗೆ ನಾಶ ಮಾಡಬಹುದು, ಅವುಗಳ

